ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 12-09-2022

ಜನವಾಡಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 98/2022 ಕಲಂ 457, 380 ಐಪಿಸಿ ;-

ದಿನಾಂಕ: 11/09/2022 ರಂದು 1530 ಗಂಟೆಗೆ ಫಿರ್ಯದಿ ಶ್ರೀ ಶಿವರಾಜ್ ತಂದೆ ಸಂಗ್ರಾಮಪ್ಪಾ ಬುಯ್ಯಾ ವಯ: 60 ವರ್ಷ ಜಾ: ಲಿಂಗಾಯತ ಉ: ಒಕ್ಕಲುತನ ಸಾ: ಮಮದಾಪೂರ ಗ್ರಾಮ ರವರು ಠಾಣೆಗೆ ಹಾಜರಾಗಿ ತಮ್ಮ ದೂರು ಸಲ್ಲಿಸಿದ್ದು ಸಾರಾಂಶವೇನೆಂದರೆ, ದಿನಾಂಕ: 10/09/2022 ರಂದು ಮಧ್ಯಾಹ್ನ ಫಿರ್ಯಾದಿ ತನ್ನ ಪತ್ನಿ ಕಲಾವತಿ ಇಬ್ಬರು ಸೆರಿಕೊಂಡು 1 ಗಂಟೆ ಸುಮಾರಿಗೆ ಬೀದರನಲ್ಲಿರುವ ಮಕ್ಕಳ ಮನೆಗೆ ಹೋಗಿರುತ್ತಾರೆ ರಾತ್ರಿ ಕತ್ತಲಾಗಿದ್ದರಿಂದ ನಮ್ಮ ಮಕ್ಕಳ ಜೊತೆ ಬೀದರನಲ್ಲಿಯೇ ಇದ್ದು ದಿನಾಂಕ: 11/09/2022 ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಮನೆಗೆ ಬಂದಿದ್ದು, ಮನೆಯ ಬೀಗ ತೆಗೆದು ಒಳಗೆ ಹೋಗಿ ನೋಡಲು ದೇವರ ಮನೆ, ಎರಡು ಬೆಡ್ ರೂಮ್ಗಳ ಬಾಗಿಲು ತೆಗೆದಿದ್ದು, ಬೆಡ್ ರೂಮಿನಲ್ಲಿರುವ ಅಲಮಾರಿಯ ಕೀಲಿ ಮುರಿದು ಅದರಲ್ಲಿದ್ದ ಬಟ್ಟೆಗಳು ಚಿಲ್ಲಾಪಿಲ್ಲಿಯಾಗಿ ಬಿದ್ದಿದವು. ಅಲಮಾರಿ ಚೆಕ್ ಮಾಡಿ ನೋಡಲಾಗಿ ಅಲಮಾರಿಯಲ್ಲಿಟ್ಟಿದ್ದ ನಗದು ಹಣ 70,000/- ರೂಪಾಯಿ ಮತ್ತು 6 ಗ್ರಾಮ್ ತೂಕವುಳ್ಳ ಒಂದು ಬಂಗಾರದ ಕಡಗ ಅ.ಕಿ. 24,000/- ರೂಪಾಯಿ, ಹಾಗು ಮಕ್ಕಳ ಕೈಯಲ್ಲಿನ ಅರ್ಧ ಗ್ರಾಂ. ತೂಕವುಳ್ಳ 10 ಬಂಗಾರದ ಉಂಗುರಗಳು ಅಂದಾಜು 1 ತೊಲೆಯ ತೂಕದ್ದು ಅಂದಾಜು ಕಿಮ್ಮತ್ತು 40,000/- ರೂಪಾಯಿ, ಹಾಗು 10 ತೊಲೆ ತೂಕವುಳ್ಳ ಮಕ್ಕಳ ಬೆಳ್ಳಿಯ ಉಡುದಾರ ಅ.ಕಿ. 5000/- ರೂಪಾಯಿ, ಚೌಕ 4 ತೊಲೆ ತೂಕವುಳ್ಳದು ಅ.ಕಿ. 2000/- ರೂಪಾಯಿ ಬೆಲೆಯುಳ್ಳದು ಇರಲಿಲ್ಲ ಯಾರೋ ಕಳ್ಳರು ಮನೆಯಲ್ಲಿಲ್ಲದನ್ನು ನೋಡಿ ದಿನಾಂಕ: 10/09/2022 ರಂದು ಮಧ್ಯಾಹ್ನ 1 ಗಂಟೆಯಿಂದ ದಿನಾಂಕ: 11/09/2022 ರಂದು ಮಧ್ಯಾಹ್ನ 1 ಗಂಟೆಯ ಮಧ್ಯಾವಧಿಯಲ್ಲಿ ಮನೆಯ ದೇವರ ಕೋಣೆಯ ವೆಂಟಿಲೆಟರನ್ನು ಮುರಿದು ಒಳಗೆ ಪ್ರವೇಶ ಮಾಡಿ ಮನೆಯಲ್ಲಿದ್ದ ನಗದು ಹಣ 70,000/- ರೂಪಾಯಿ ಹಾಗು ಒಟ್ಟು 71,000/- ರೂಪಾಯಿಯ ಬೆಲೆಯುಳ್ಳ ಬಂಗಾರ ಹಾಗು ಬೆಳ್ಳಿಯ ವಡವೆಗಳು ಹೀಗೆ ಎಲ್ಲಾ ಒಟ್ಟು 1,41,000/- ನಗದು ಹಣ, ಬಂಗಾರ ಬೆಳ್ಳಿಯ ವಡವೆಗಳು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಧನ್ನೂರಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 127/2022 ಕಲಂ 380 ಐಪಿಸಿ :-

ದಿನಾಂಕ: 11/09/2022 ರಂದು 1330 ಗಂಟೆಗೆ ಫಿರ್ಯಾದಿ ಶ್ರೀ ಸೊಮಾನಾಥ ತಂದೆ ಕಾಶಿನಾಥ ಧನ್ನೆ ವಯ: 50 ವರ್ಷ ಜಾತಿ: ಲಿಂಗಾಯತ ಉ: ಒಕ್ಕಲುತನ ಸಾ: ಕೊಣಮೆಳಕುಂದಾ ಇವರ ಠಾಣೆಗೆ ಹಾಜರಾಗಿ ತಮ್ಮ ದೂರು ಅರ್ಜಿ ನೀಡಿದ್ದು ಅದರ ಸಾರಾಂಶವೇನೆದರೆ ದಿನಾಂಕ: 02/09/2022 ರಂದು ಗ್ರಾಮದಲ್ಲಿ ಸಂಬಂಧಿಕರ ಮನೆಯಲ್ಲಿ ಕಾರ್ಯಕ್ರಮ ಇದ್ದಾಗ ಮನೆಯಲ್ಲಿ ಇದ್ದ 1] 3.5 ತೊಲಿ ಬಂಗಾರದ ಒಂದು ಜೊತೆ ಪಾಟ್ಲಿ ಅ.ಕಿ. 1,75,000/- ರೂಪಾಯಿ, 2] 3.5 ತೊಲಿ ಬಂಗಾರದ ಮೂರು ಪದರಿನ ಒಂದು ಜೊತೆ ಚೈನ ಸರ ಅ.ಕಿ. 1,75,000/- ರೂಪಾಯಿ, 3] 5 ಗ್ರಾಮ ಬಂಗಾದ ಸುತ್ತೂಂಗುರ ಅ.ಕಿ. 25,000/- ರೂಪಾಯಿ, 4] 4 ಗ್ರಾಮ ಬಂಗಾರದ ಸುತ್ತೂಂಗುರ ಅ.ಕಿ. 20,000/- ರೂಪಾಯಿ ನೇದವುಗಳನ್ನು ಹೆಂಡತಿ ಶ್ರೀಮತಿ ರೇಣುಕಾ ಇವರು ಧರಿಸಿಕೊಂಡು ಸಂಬಂಧಿಕರ ಕಾರ್ಯಕ್ರಮಕ್ಕೆ ಹೊಗಿದ ಕಾರ್ಯಕ್ರಮ ಮುಗಿಸಿಕೊಂಡು ಸಾಯಂಕಾಲ 7:00 ಗಂಟೆಗೆ ಮರಳಿ ಮನೆಗೆ ಬಂದು ಅವುಗಳನ್ನು ಮನೆಯಲ್ಲಿ ಇದ್ದ ಒಂದು ಡಬ್ಬಿಯಲ್ಲಿ ಹಾಕಿ, ಮನೆಯಲ್ಲಿ ಇದ್ದ ಒಂದು ನಳದ ಪಾತ್ರೆಯಲ್ಲಿ ಇಟ್ಟಿರುತ್ತಾರೆ. ನಂತರ 08/09/2022 ರಂದು ರೇಣುಕಾ ಇವರು ಹೊಲದಲ್ಲಿ ಕೆಲಸ ಮಾಡುವಾಗ ಅವರ ಕೀವಿಯಲ್ಲಿನ ಬಂಗಾರದ ಬೇಂಡೊಳಿ ಮೂರಿದಾಗ ಸಾಯಂಕಾಲ 7:00 ಗಂಟೆಗೆ ಮನೆಗೆ ಬಂದು ಮುರಿದಿರುವ ಕೀವಿನ ಬಂಗಾರದ ಬೆಂಡೊಳಿಯನ್ನು ಮನೆಯಲ್ಲಿನ ನಳದ ಪಾತ್ರೆಯಲ್ಲಿ ಇಡಲು ಪಾತ್ರೆ ತೆರೆದು ನೊಡಿದಾಗ ಅದರಲ್ಲಿಟ್ಟಿರುವ ಮೆಲ್ಕಂಡ ಬಂಗಾರ ಆಭರಣಗಳು ಇಟ್ಟಿದ ಡಬ್ಬಿ ಕಾಣಿಸಿರುವುದಿಲ್ಲ. ದಿನಾಂಕ: 08/09/2022 ರಂದು ಸಾಯಂಕಾಲ 7: 00 ಗಂಟೆಯ ಮದ್ಯದ ಅವಧಿಯಲ್ಲಿ ಯಾರೊ ಅಪರೀಚಿತ ಕಳ್ಳರು ಮನೆಯಲ್ಲಿ ಇಟ್ಟಿದ್ದ ಅಂ.ಕಿ 3,95,000/- ರೂಪಾಯಿಯ ಬಂಗಾರದ ಆಭರಣಗಳು ಕಳವು ಮಾಡಿಕೊಂಡು ಹೋಗಿರುತ್ತಾರೆ.